# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/158/ಸಾ.ಸ/2021-22

ಜ್ಞಾನ ಭಾರತಿ,
ಬೆಂಗಳೂರು-560 056
ದಿನಾಂಕ: 12.11.2021

ಗೆ,

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056.

ಮಾನ್ಯರೇ,

ವಿಷಯ: ಸಿಂಡಿಕೇಟ್ ಸದಸ್ಯರ ಹೆಸರುಗಳನ್ನು ನಮೂದಿಸಿ 158ನೇ ಮುಂದೂಡಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮರುಹೊರಡಿಸುವ ಬಗ್ಗೆ.

ಉಲ್ಲೇಖ: 1. ದಿನಾಂಕ 14.09.2021 ರಂದು ನಡೆದ 160ನೇ ಸಿಂಡಿಕೇಟ್ ಸಭೆಯ ನಿರ್ಣಯ
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 10.11.2021

******

ದಿನಾಂಕ 14.07.2021 ರಂದು ಜರುಗಿದ ಮುಂದೂಡಿದ 158ನೇ ಸಿಂಡಿಕೇಟ್ ಸಭೆಯ ನಡಾವಳಿಯಲ್ಲಿ ಸಿಂಡಿಕೇಟ್ ಸದಸ್ಯರುಗಳ ಹೆಸರುಗಳನ್ನು ನಮೂದಿಸಿ ತಿದ್ದುಪಡಿ ಮಾಡಲಾದ ನಡಾವಳಿಯನ್ನು ಈ ಪತ್ರದೊಂದಿಗೆ ಕಳುಹಿಸಲಾಗಿದೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,
K. Jyothi 12/11/2021
ಕುಲಸಚಿವರು

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/158/ಸಾ.ಸ/2020-21

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 26-07-2021

**ದಿನಾಂಕ 14-07-2021 ರಂದು ಬೆಳಿಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 009, ಇಲ್ಲಿ ಜರುಗಿದ 158ನೇ ಮುಂದೂಡಲ್ಪಟ್ಟ ಸಿಂಡಿಕೇಟ್ ಸಭೆಯ ನಡವಳಿಗಳು.**

<u>ಹಾಜರಾದ ಸದಸ್ಯರು:</u>

| | | | |
|---|---|---|---|
| 1. | ಪ್ರೊ. ವೇಣುಗೋಪಾಲ್ ಕೆ.ಆರ್.<br>ಕುಲಪತಿಗಳು | - | ಸಭಾಧ್ಯಕ್ಷರು |
| 2. | ಶ್ರೀ ಶ್ರೀಕಾಂತ್ ಜಿ,<br>ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪರವಾಗಿ | - | ಸದಸ್ಯರು |
| 3. | ಡಾ: ಹಸೀನ್ ತಾಜ್ | - | ಸದಸ್ಯರು |
| 4. | ಡಾ॥ ಸುಧಾಕರ ಹೆಚ್ | - | ಸದಸ್ಯರು |
| 5. | ಶ್ರೀ ಎಂ. ಉದಯ ಕುಮಾರ್ | - | ಸದಸ್ಯರು |
| 6. | ಶ್ರೀಮತಿ ಪದ್ಮ ವಿ | - | ಸದಸ್ಯರು |
| 7. | ಶ್ರೀ ಹೆಚ್.ಆರ್. ಕುಮಾರಸ್ವಾಮಿ | - | ಸದಸ್ಯರು |
| 8. | ಶ್ರೀ ಜಯರಾಮ | - | ಸದಸ್ಯರು |
| 9. | ಡಾ॥ ವತ್ಸಲ ಎನ್ | - | ಸದಸ್ಯರು |
| 10. | ಡಾ॥ ಗೋವಿಂದರಾಜು | - | ಸದಸ್ಯರು |
| 11. | ಶ್ರೀ ಗೋಪಿನಾಥ್ | - | ಸದಸ್ಯರು |
| 12. | ಡಾ॥ ಎಂ.ವಿ. ಆಶಾ | - | ಸದಸ್ಯರು |
| 13. | ಶ್ರೀ ಪ್ರೇಮ್ ಸೋಹನ್ ಲಾಲ್ | - | ಸದಸ್ಯರು |
| 14. | ಪ್ರೊ. ಟಿ.ವಿ. ರಾಜು | - | ಸದಸ್ಯರು |
| 15. | ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ | - | ಸದಸ್ಯರು |
| 16. | ಪ್ರೊ. ಜಯಕುಮಾರ್ ಜಿ. ರೆಡ್ಡಿ | - | ಸದಸ್ಯರು |
| 17. | ಶ್ರೀಮತಿ ರೂಪಶ್ರೀ ಎಸ್. ಕೆ.ಎ.ಎಸ್.<br>ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಪರವಾಗಿ | - | ಸದಸ್ಯರು |
| 18. | ಶ್ರೀ ಮಹಮ್ಮದ್ ಝಿಯಾ ಉಲ್ಲಾಖಾನ್<br>ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರ ಪರವಾಗಿ | - | ಸದಸ್ಯರು |
| 19. | ಪ್ರೊ. ಜೆ.ಟಿ. ದೇವರಾಜು,<br>ಕುಲಸಚಿವರು (ಮೌಲ್ಯಮಾಪನ) | - | ಸದಸ್ಯರು |
| 20. | ಶ್ರೀಮತಿ ಕೆ. ಜ್ಯೋತಿ, ಭಾ.ಆ.ಸೇ<br>ಕುಲಸಚಿವರು | - | ಸದಸ್ಯ ಕಾರ್ಯದರ್ಶಿ |

ಒಂದು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು, ಸಭಾಧ್ಯಕ್ಷರನ್ನು ಹಾಗೂ ಸದಸ್ಯರನ್ನು ಸ್ವಾಗತಿಸಿ, ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಕುಲಪತಿಗಳನ್ನು ಕೋರಿದರು.

ಕುಲಪತಿಗಳು, ಸದಸ್ಯರೆಲ್ಲರನ್ನು ಮತ್ತೊಮ್ಮೆ ಸ್ವಾಗತಿಸಿ, ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು. ಈ ಹಂತದಲ್ಲಿ ಸದಸ್ಯರುಗಳು ಮಾತನಾಡಿ ಕೆಲವು ತುರ್ತು ವಿಷಯಗಳನ್ನು ಚರ್ಚಿಸುವುದಿದೆಯೆಂದು ತಿಳಿಸಿ ಚರ್ಚಿಸಲು ಅವಕಾಶ ಮಾಡಿಕೊಡಬೇಕೆಂದು ತಿಳಿಸಿದರು.

ಡಾ॥ ಸುಧಾಕರ ಹೆಚ್ ಹಾಗೂ ಡಾ॥ ಗೋವಿಂದರಾಜು ಅವರುಗಳು ಮಾತನಾಡಿ ದಿನಾಂಕ: 04–05–2021 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಂತರ ಎಂಟು ಜನ ಸದಸ್ಯರುಗಳು ಲಿಖಿತವಾಗಿ ಪತ್ರ ನೀಡಿದ್ದು ಪತ್ರದಲ್ಲಿನ ಅಂಶಗಳನ್ನು ನಡಾವಳಿಯಲ್ಲಿ ತಂದಿರುವುದಿಲ್ಲ ಹಾಗೂ ಸದರಿ ಸಭೆ ಮತ್ತು ದಿನಾಂಕ: 19–05–2021ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸದಸ್ಯರುಗಳಿಗೆ ಕಳುಹಿಸಿಕೊಟ್ಟಿಲ್ಲವೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ, ದಿನಾಂಕ: 04–05–2021ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಇ–ಮೇಲ್ ಹಾಗೂ ಖುದ್ದಾಗಿ ಸದಸ್ಯರುಗಳಿಗೆ ಕಳುಹಿಸಿಕೊಡಲಾಗಿದೆ. ದಿನಾಂಕ: 19–05–2021ರಂದು ಜರುಗಿದ 58ನೇ ಸಿಂಡಿಕೇಟ್ ಸಭೆಯಲ್ಲಿ ಸದಸ್ಯರುಗಳು ಸಿಂಡಿಕೇಟ್ ನಡಾವಳಿಯನ್ನು ವಿಡಿಯೋ ರೆಕಾರ್ಡಿಂಗ್ ಮಾಡುತ್ತಿಲ್ಲ, ಸದಸ್ಯರುಗಳು ಮಾತನಾಡಿದ ಎಲ್ಲಾ ವಿಷಯಗಳನ್ನು ಯಥಾವತ್ತಾಗಿ ದಾಖಲಿಸಿರುವುದಿಲ್ಲ, ಬ್ಯಾಕ್–ಲಾಗ್ ಹುದ್ದೆಗಳ ನೇಮಕಾತಿ ವಿಷಯವಾಗಿ ವಿಶೇಷ ಸಿಂಡಿಕೇಟ್ ಸಭೆ ಕರೆದಿರುವುದಿಲ್ಲವೆಂದು, ಹಾಗೂ ಇನ್ನಿತರ ವಿಷಯಗಳನ್ನು ಪ್ರಸ್ತಾಪಿಸಿ ಸಭಾತ್ಯಾಗ ಮಾಡಿದ್ದರಿಂದ ಅಂದಿನ ಸಭೆಯಲ್ಲಿ ಯಾವುದೇ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡಿರುವುದಿಲ್ಲ. ಸಭೆಯನ್ನು ಮುಂದೂಡಲಾಗಿತ್ತು. ಸಿಂಡಿಕೇಟ್ ನಡಾವಳಿಗಳನ್ನು ಪರಿನಿಯಮಾವಳಿಯನುಸಾರ ಸಂಕ್ಷಿಪ್ತವಾಗಿ ಹೊರಡಿಸಲಾಗುತ್ತದೆ ಎಂದು ತಿಳಿಸಿದರು.

ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ ಸಿಂಡಿಕೇಟ್ ನಡಾವಳಿಗಳಿಗೆ ಕುಲಪತಿಗಳು ಮಾತ್ರ ಸಹಿ ಹಾಕಿದ್ದಾರೆ. ಕುಲಸಚಿವರು ಸಹಿ ಮಾಡಿರುವುದಿಲ್ಲ. ಈ ಬಗ್ಗೆ ಸಿಂಡಿಕೇಟ್‌ಗೆ ಮಾಹಿತಿ ನೀಡಬೇಕೆಂದರು. ಹಾಗೂ ಪರಿನಿಯಮಾವಳಿಯನುಸಾರ ಸದಸ್ಯರು ವಿಷಯಗಳ ಬಗ್ಗೆ ಚರ್ಚಿಸಿದ ವಿವರ ಹಾಗೂ ನಿರ್ಧಾರವನ್ನು ದಾಖಲಿಸಿ ಕೂಡಲೇ ಓದಿ ಹೇಳಬೇಕು. ಸಿಂಡಿಕೇಟ್ ನಡಾವಳಿಗಳನ್ನು ವಹಿಯಲ್ಲಿ ಬರೆದು ದಾಖಲಿಸಿ ಕೂಡಲೇ ಸಭೆಯಲ್ಲಿ ಎಲ್ಲಾ ಸಿಂಡಿಕೇಟ್ ಸದಸ್ಯರಿಗೆ ತೋರಿಸಿ ಸಹಿ ಪಡೆಯಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಪರಿನಿಯಮಾವಳಿಯಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಗೆ ಯಾರು ಸಹಿ ಮಾಡಬೇಕೆಂದು ಸ್ಪಷ್ಟವಾಗಿ ನಮೂದು ಮಾಡಿರುವುದಿಲ್ಲ. ಆದರೆ, ಪರಿನಿಯಮಾವಳಿ 4.18ರ ಪ್ರಕಾರ ವಿದ್ಯಾವಿಷಯಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಸಭಾಧ್ಯಕ್ಷರಾದ ಕುಲಪತಿಗಳು ಮಾತ್ರ ಸಹಿ ಮಾಡಬೇಕೆಂದು ಇದೆ. ಅದೇ ರೀತಿ ಸಿಂಡಿಕೇಟ್ ನಡಾವಳಿಗಳಿಗೆ ಕುಲಪತಿಗಳು ಸಹಿ ಮಾಡಿರುವುದನ್ನು ಪರಿಗಣಿಸಬೇಕಾಗುತ್ತದೆ. ಇನ್ನು ಸಾಮಾನ್ಯ ಚರ್ಚೆಯ ನಿರ್ಣಯಗಳನ್ನು ಕೂಡಲೇ ದಾಖಲಿಸಿ ಓದಲು ಬರುವುದಿಲ್ಲ ಏಕೆಂದರೆ ಅದು ಸದಸ್ಯರುಗಳು ಪ್ರಸ್ತಾಪಿಸುವ ವಿಷಯಗಳು ಹಾಗೂ ಪ್ರಶ್ನೆಗಳಿಗೆ ಕುಲಪತಿಗಳು ನೀಡುವ ಉತ್ತರವಷ್ಟೆ. ಆದರೆ, ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿರುವ ಕಾರ್ಯಸೂಚಿಯ ಮೇಲೆ ತೆಗೆದುಕೊಳ್ಳುವ ನಿರ್ಣಯಗಳನ್ನು ಓದಿ ತಿಳಿಸಬಹುದಾಗಿದೆಯೆಂದರು.

ಡಾ॥ ಗೋವಿಂದರಾಜು ಅವರು ಮಾತನಾಡಿ ಸಿಂಡಿಕೇಟ್ ಸಭೆಯನ್ನು ಜ್ಞಾನಭಾರತಿ ಆವರಣದಲ್ಲೇ ಮಾಡಬೇಕು. ಸಭೆಯಲ್ಲಿ ಕೋರುವ ದಾಖಲೆಗಳನ್ನು ಕೂಡಲೇ ಒದಗಿಸಲು ಸಹ ಅನುಕೂಲವಾಗುತ್ತದೆ.

ಅವರು ಕುಲಪತಿಗಳಿಗೆ ಸಲ್ಲಿಸಿದ ಪತ್ರಕ್ಕೆ ತಲುಪಿರುವುದಕ್ಕೆ ಸ್ವೀಕೃತಿ ಅಥವಾ ಉತ್ತರ ಬಂದಿರುವುದಿಲ್ಲವೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಸದರಿ ಸದಸ್ಯರ ಪತ್ರ ಬಂದಿದೆ. ಪತ್ರದಲ್ಲಿ ಅವರು ನೀಡಿರುವ ಸಲಹೆಗಳನ್ನು ಕಾರ್ಯಗತ ಮಾಡುವ ಬಗ್ಗೆ ಪರಿಶೀಲಿಸಲಾಗುವುದು. ಸಾಕಷ್ಟು ತುರ್ತು ವಿಷಯಗಳನ್ನು ಈ ಸಿಂಡಿಕೇಟ್ ಮುಂದೆ ಮಂಡಿಸಿರುವುದರಿಂದ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ಸದಸ್ಯರಿಗೆ ಮನವಿ ಮಾಡಿದರು.

ಕುಲಸಚಿವರೂ ಸಹ ವಿಷಯಗಳನ್ನು ಕಾರ್ಯ ಸೂಚಿಯನ್ನು ಚರ್ಚೆಗೆ ತೆಗೆದುಕೊಂಡು ಚರ್ಚೆಯ ನಂತರ ನಿರ್ಣಯ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿದರು.

ಸದಸ್ಯರುಗಳು ಮಾತನಾಡಿ, ಸಂಜೆಯವರೆಗೆ ಸಭೆ ನಡೆಸಬಹುದಾಗಿದೆ ಹಾಗೂ ಮತ್ತೊಂದು ಸಿಂಡಿಕೇಟ್ ಸಭೆ ಕೂಡ ಆಯೋಜಿಸಬಹುದು. ಆದಕಾರಣ ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕಾಗಿದೆ. ನಂತರ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬಹುದು ಎಂದು ತಿಳಿಸಿದರು. ಈ ಹಂತದಲ್ಲಿ ಡಾ॥ ಗೋವಿಂದರಾಜು ಹಾಗೂ ಡಾ॥ ಸುಧಾಕರ ಹೆಚ್ ಅವರುಗಳು ಪಿ.ಹೆಚ್.ಡಿ. ಪ್ರವೇಶಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಮನವಿಯ ಬಗ್ಗೆ ಮಾತನಾಡಿ, ಪ್ರತಿ ಮಾರ್ಗದರ್ಶಕರಿಗೆ ಹೆಚ್ಚುವರಿಯಾಗಿ ಒಬ್ಬ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲು ಅವಕಾಶ ನೀಡಬೇಕು ಹಾಗೂ ಇಂಟರ್ ಡಿಸಿಪ್ಲಿನರಿ ಸಂಶೋಧನೆ ಮಾಡಲು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಬೇಕೆಂದು ತಿಳಿಸಿದರು.

ಶ್ರೀ ಉದಯ ಕುಮಾರ್ ಎಂ, ಅವರು ಮಾತನಾಡಿ ಈ ಹಿಂದೆ ಎನ್.ಎಸ್.ಎಸ್ ಸಂಯೋಜನಾಧಿಕಾರಿಗಳಾಗಿದ್ದ ಡಾ॥ ಸತೀಶ್ ಗೌಡ ಅವರ ಜಾಗದಲ್ಲಿ ಬೇರೊಬ್ಬ ಅಧಿಕಾರಿಯನ್ನು ನೇಮಿಸಬೇಕೆಂದು ಹಾಗೂ 75 ನೇ ಸ್ವಾತ್ರಂತ್ರ್ಯೋತ್ಸವ ನಿಮಿತ್ತ ಏರ್ಪಡಿಸಿರುವ "ವಿಚಾರ ಕಲರವ" ಕಾರ್ಯಕ್ರಮವನ್ನು ಮುಂದುವರೆಸಬೇಕು. ಪತ್ರಿಕೆಯಲ್ಲಿ ಬಂದಿರುವ ವರದಿಯ ಬಗ್ಗೆ ಡಾ॥ ಸತೀಶ್‌ಗೌಡ ರವರಿಂದ ಸ್ಪಷ್ಟೀಕರಣ ಪಡೆದು ಸಿಂಡಿಕೇಟ್ ಮುಂದೆ ಮಂಡಿಸಬೇಕು, ಹಿಂದಿನ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಯು.ವಿ.ಸಿ.ಇ ಕ್ಯಾಂಪಸ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ತಾತ್ಕಾಲಿಕ ಗುತ್ತಿಗೆ ನೌಕರರಾದ ಶ್ರೀ ಭಾಸ್ಕರ್‌ರವರನ್ನು ಜ್ಞಾನಭಾರತಿ ಆವರಣಕ್ಕೆ ಕೂಡಲೇ ವರ್ಗಾಯಿಸಬೇಕು. ಯು.ವಿ.ಸಿ.ಇ ಆವರಣದಲ್ಲಿ ನಿರ್ಮಿಸಲಾಗುತ್ತಿರುವ ಕೆಫೆಟೇರಿಯಾ ಸಂಬಂಧಿಸಿದ ಕಾಮಗಾರಿ ಬಿಲ್ಲನ್ನು ಮೂರನೇ ಸಂಸ್ಥೆಯಿಂದ ತಾಂತ್ರಿಕ ಪರಿಶೀಲನೆ ಮಾಡಿಸಿ ನಂತರ ಬಿಲ್ಲನ್ನು ಪಾವತಿ ಮಾಡಬೇಕು. ವಿಶ್ವವಿದ್ಯಾಲಯದ ಯಾವುದೇ ಹಣಕಾಸು ಬಿಡುಗಡೆ ಮಾಡುವ ಮೊದಲು ಸಿಂಡಿಕೇಟ್ ಮುಂದೆ ಮಂಡಿಸಿ ಅನುಮೋದನೆ ಪಡೆಯಬೇಕು ಹಾಗೂ ಸಿಂಡಿಕೇಟ್ ಸದಸ್ಯರುಗಳು ನೀಡುವ ಪತ್ರಗಳಿಗೆ ಉತ್ತರ ನೀಡಬೇಕು. ಶ್ರೀ ಮಲ್ಲೇಶ್, ಚಾಲಕರು ಇವರ ಬಗೆಗಿನ ಸೇವಾ ವಿವರಗಳನ್ನು ಸದಸ್ಯರಿಗೆ ಒದಗಿಸಬೇಕೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ ಪ್ರಸ್ತುತ ಖಾಲಿಯಿರುವ ಎನ್.ಎಸ್.ಎಸ್ ಸಂಯೋಜನಾಧಿಕಾರಿ ಹುದ್ದೆಯಲ್ಲಿ Additional Charge ಮೇಲೆ ಕೆಲಸ ನಿರ್ವಹಿಸಲು ಈ ಕೆಳಕಂಡ ವಿಶ್ವವಿದ್ಯಾಲಯದ ಶಿಕ್ಷಕರಲ್ಲೊಬ್ಬರನ್ನು ಕರ್ನಾಟಕ ಸರ್ಕಾರದ ಕ್ರೀಡೆ, ಯುವಜನ ಮತ್ತು ಸಬಲೀಕರಣ ಇಲಾಖೆಯಿಂದ ಅನುಮತಿ ಪಡೆದು ತಾತ್ಕಾಲಿಕವಾಗಿ ನೇಮಿಸಬಹುದಾಗಿದೆ ಎಂದು ತಿಳಿಸಿದರು.

1. ಪ್ರೊ. ಎಸ್.ಆರ್. ಕೇಶವ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಬೆಂ.ವಿ.ವಿ.

2. ಡಾ॥ ರವೀಶ ಹೆಚ್.ಆರ್. ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ, ಬೆಂ.ವಿ.ವಿ.
3. ಡಾ॥ ಪುಟ್ಟಸ್ವಾಮಯ್ಯ ಎಸ್, ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಬೆಂ.ವಿ.ವಿ.
4. ಡಾ॥ ಸುರೇಂದ್ರ ಕುಮಾರ್ ಎಸ್.ವೈ, ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಬೆಂ.ವಿ.ವಿ.

ಕುಲಪತಿಗಳು ಮುಂದುವರೆದು ಮಾತನಾಡಿ ಪೂರ್ವಾನುಮತಿ ಇಲ್ಲದೇ ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ನೀಡಿದ್ದರೆ ಅಂತಹವರಿಂದ ವಿವರಣೆಯನ್ನು ಪಡೆಯಲಾಗುವುದು. ಯು.ವಿ.ಸಿ.ಇ ಆವರಣದಲ್ಲಿ ನಿರ್ಮಿಸಲಾಗುತ್ತಿರುವ ಕೆಫೆಟೇರಿಯಾ ಕಟ್ಟಡ ಕಾಮಗಾರಿಯನ್ನು ಸರ್ಕಾರಿ ಸಂಸ್ಥೆಯಾದ ಮೆ॥ ಕೆ.ಆರ್.ಐ.ಡಿ.ಎಲ್ ನಿರ್ವಹಿಸುತ್ತಿದ್ದು, ಈ ಸಂಸ್ಥೆ ಕೋರಿರುವುದು ಸದರಿ ಕಾಮಗಾರಿ ಸಂಬಂಧಿಸಿದಂತೆ ಠೇವಣಿ ಮೊತ್ತವನ್ನು ಪಾವತಿಸಿದ ನಂತರ ಸದರಿ ಸಂಸ್ಥೆ ಪ್ರಮಾಣಪತ್ರ ಸಲ್ಲಿಸುತ್ತದೆ. ಸದಸ್ಯರುಗಳ ಸಲಹೆಯಂತೆ ಟೆಕ್ನಿಕಲ್ ಕಮಿಟಿ ವತಿಯಿಂದ ಕಾಮಗಾರಿ ಗುಣಮಟ್ಟವನ್ನು ಪರಿಶೀಲಿಸಲು ಸೂಚಿಸಲಾಗುವುದು. ಶ್ರೀ ಉದಯ ಕುಮಾರ್ ಎಂ ಅವರೂ ಕೂಡ ಭೇಟಿ ನೀಡಿ ಪರಿಶೀಲಿಸಬಹುದು. ಇನ್ನೂ ಸಿಂಡಿಕೇಟ್ ಸದಸ್ಯರುಗಳು ಸಲ್ಲಿಸಿರುವ ಪತ್ರಗಳಿಗೆ ಸೂಕ್ತ ಉತ್ತರವನ್ನು ಹದಿನೈದು ದಿನಗಳೊಳಗಾಗಿ ನೀಡಲು ಸಂಬಂಧಪಟ್ಟವರಿಗೆ ಸೂಚಿಸಲಾಗುವುದು. ಶ್ರೀ ಭಾಸ್ಕರ್ ಅವರನ್ನು ಜ್ಞಾನಭಾರತಿ ಆವರಣದಲ್ಲಿ ಕೆಲಸ ನಿರ್ವಹಿಸಲು ಸೂಚಿಸಲಾಗುವುದು ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಅಧಿಕಾರಿಗಳಿಗೆ ಪತ್ರಿಕಾಗೋಷ್ಠಿ ನಡೆಸಲು ಅವಕಾಶವಿರುವುದಿಲ್ಲ. ಆದರೆ, ಪತ್ರಿಕಾ/ಮಾಧ್ಯಮ ವರದಿಗಾರರು ಸಂಪರ್ಕಿಸಿದಾಗ, ಅವರಿಗೆ ಉತ್ತರ ನೀಡಬೇಕಾಗುತ್ತದೆಂದರು.

ಡಾ॥ ಗೋವಿಂದರಾಜು ಅವರು ಮಾತನಾಡಿ ಬೆಂಗಳೂರು ವಿಶ್ವವಿದ್ಯಾಲಯವು ಸೆಪ್ಟೆಂಬರ್ – 2021ರೊಳಗೆ ನ್ಯಾಕ್ ಸಂಸ್ಥೆಯಿಂದ ಮರು–ಮೌಲ್ಯಮಾಪನಕ್ಕೆ ಅರ್ಜಿಸಲ್ಲಿಸಲು ವಿಶ್ವವಿದ್ಯಾಲಯವು ಮಾಡಿಕೊಂಡಿರುವ ಸಿದ್ಧತೆಗಳ ವಿವರಗಳನ್ನು ನೀಡಬೇಕು ಹಾಗೂ ಪೂರ್ವ ಸಿದ್ಧತೆಗಳಿಗೋಸ್ಕರ ಸಮಿತಿಯನ್ನು ರಚಿಸಬೇಕು. ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ನಿರ್ಣಯಿಸಿದಂತೆ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಕೆಲವು ಶಾಸನಬದ್ಧ ಹುದ್ದೆಗಳು ಸೇರಿ ಹಲವು ಹುದ್ದೆಗಳಿಗೆ ನೇಮಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಪರಿಶಿಷ್ಟ ಪಂಗಡಗಳ ಕಲ್ಯಾಣ ಮತ್ತು ಸುಧಾರಣಾ ಸಮಿತಿ ಸಭೆಯನ್ನು ಆದಷ್ಟು ಬೇಗ ಕರೆಯಬೇಕೆಂದರು. ವಿಶ್ವವಿದ್ಯಾಲಯದ ಪ್ರತಿ ವಿಭಾಗಳಿಗೆ ಒಂದು ಮೇಜರ್/ಮೈನರ್ ಪ್ರಾಜೆಕ್ಟ್ ಅನ್ನು ವಿಶ್ವವಿದ್ಯಾಲಯದಿಂದ ಮಂಜೂರು ಮಾಡಲು ಹಾಗೂ ವಿಚಾರ ಸಂಕಿರಣ ಹಮ್ಮಿಕೊಳ್ಳಲು ಉತ್ತೇಜನ ನೀಡಬೇಕು ಮತ್ತು ವಿಭಾಗಗಳಲ್ಲಿ ಮೂಲ ಸೌಕರ್ಯಗಳನ್ನು ಹೆಚ್ಚಿಸಲು ಅಗತ್ಯ ಕ್ರಮ ಕೈಗೊಂಡರೆ, ವಿಶ್ವವಿದ್ಯಾಲಯದ ನ್ಯಾಕ್ ಮರು–ಮೌಲ್ಯೀಕರಣಕ್ಕೆ ಅನುಕೂಲವಾಗುವುದು ಎಂದು ಪ್ರಸ್ತಾಪಿಸಿದರು.

ಕುಲಪತಿಗಳು ಉತ್ತರಿಸಿ ನ್ಯಾಕ್ ಸಂಸ್ಥೆಯಿಂದ ವಿಶ್ವವಿದ್ಯಾಲಯದ ಮರು ಮೌಲ್ಯಮಾಪನ ಕುರಿತು ಕ್ರಮ ಕೈಗೊಳ್ಳಲಾಗುತ್ತಿಗೆ. ನ್ಯಾಕ್ ಮರು–ಮೌಲ್ಯಮಾಪನದ ಪೂರ್ವ ಸಿದ್ಧತಾ ಕಾರ್ಯಕ್ರಮಗಳ ಉಸ್ತುವಾರಿ ನಿರ್ವಹಿಸಲು ಎಲ್ಲಾ ಡೀನರುಗಳು ಮತ್ತು ನಾಲ್ಕು ಹಿರಿಯ ಪ್ರಾಧ್ಯಾಪಕರುಗಳನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲಾಗುವುದು. ಹಾಸ್ಟೆಲ್‌ಗಳ ಪ್ರಧಾನ ಕ್ಷೇಮಪಾಲಕರು ಸೇರಿ ಪ್ರಸ್ತುತ ಖಾಲಿ ಉಳಿದಿರುವ ಹುದ್ದೆಗಳಿಗೆ ವಿಶ್ವವಿದ್ಯಾಲಯ ಶಿಕ್ಷಕರುಗಳಿಂದ ಅರ್ಜಿ ಸಲ್ಲಿಸಲು ಅಧಿಸೂಚನೆ ಹೊರಡಿಸಲಾಗುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಮತ್ತು ಸುಧಾರಣಾ ಸಮಿತಿ ಸಭೆಯನ್ನು ಕರೆಯಲು ಸದರಿ ವಿಭಾಗದ ವಿಶೇಷಾಧಿಕಾರಿಗಳಿಗೆ ಸೂಚಿಸಲಾಗುವುದು. ವಿಶ್ವವಿದ್ಯಾಲಯದ ಶಿಕ್ಷಕರುಗಳಿಂದ Research Project ಪ್ರಸ್ತಾವನೆಯನ್ನು ಸಲ್ಲಿಸಲು ಹಾಗೂ ಪ್ರತಿ ಪ್ರಾಜೆಕ್ಟ್‌ಗೆ ರೂ.2.00 ಲಕ್ಷಗಳನ್ನು ಮಂಜೂರು ಮಾಡಲಾಗುವುದೆಂದು ತಿಳಿಸಿ ಸುತ್ತೋಲೆ ಹೊರಡಿಸಲಾಗಿದೆ. ವಿಭಾಗಳಲ್ಲಿ ನಡೆಯುವ ಕಾರ್ಯಾಗಾರಗಳು/ ವಿಚಾರ ಸಂಕಿರಣಗಳಿಗೆ

ಯು.ಜಿ.ಸಿ. ನಿಯಮಾವಳಿಗಳನುಸಾರ ವಿಶ್ವವಿದ್ಯಾಲಯದಿಂದ ಧನ ಸಹಾಯ ನೀಡಲಾಗುತ್ತಿದೆ. ಇನ್ನೂ ಪ್ರತೀ ವಿಭಾಗದಲ್ಲಿ ಬೋಧನಾ ತರಗತಿಗಳನ್ನು Smart Class ಆಗಿ ಪರಿವರ್ತಿಸಲು ಹಾಗೂ ವಿಭಾಗಗಳಲ್ಲಿ ಮೂಲ ಸೌಕರ್ಯವನ್ನು ಉನ್ನತೀಕರಿಸಲು ಕ್ರಮ ಕೈಗೊಳ್ಳಲಾಗುವುದು.

ಕುಲಸಚಿವರು ಮಾತನಾಡಿ ಈಗಾಗಲೇ ಪರಿನಿಯಮಾವಳಿ ರಚಿಸಿರುವ ಹುದ್ದೆಗಳಿಗೆ ಮಾತ್ರ ನೇಮಕಾತಿ ಮಾಡಬಹುದಾಗಿದೆ. ಆದರೆ ಸಂಯೋಜನಾಧಿಕಾರಿ, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಹಾಸ್ಟೆಲ್ ಪ್ರಧಾನ ಕ್ಷೇಮಪಾಲಕರು, ವಿಶ್ಲೇಷಾಧಿಕಾರಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕೋಶ ಮುಂತಾದ ಹುದ್ದೆಗಳಿಗೆ ಪರಿನಿಯಮಾವಳಿ ರಚಿಸಿರುವುದಿಲ್ಲ. ಹಿಂದಿನಿಂದಲೂ ರೂಢೀಗತವಾಗಿ ಈ ಸ್ಥಾನಗಳಿಗೆ ಪ್ರಭಾರ ಅಧಿಕಾರಿಗಳನ್ನು ನೇಮಿಸಲಾಗುತ್ತಾ ಬರಲಾಗಿದೆ. ಆದಕಾರಣ ಈ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ ಹಿಂದಿನಿಂದ ಬಂದಿರುವ ಪದ್ಧತಿಯಂತೆ ಎಲ್ಲಾ ಸದರಿ ಸ್ಥಾನಗಳಿಗೆ ಶಿಕ್ಷಕರನ್ನು ಹೆಚ್ಚುವರಿ ಪ್ರಭಾರ ಕಾರ್ಯ ಆಧಾರದ ಮೇಲೆ ನೇಮಿಸಬಹುದಾಗಿದೆ ಎಂದು ತಿಳಿಸಿದರು.

ಚರ್ಚೆಯ ನಂತರ ಹಾಸ್ಟೆಲ್ ಪ್ರಧಾನ ಕ್ಷೇಮಪಾಲಕರು ಸೇರಿ ಖಾಲಿ ಇರುವ ಸ್ಥಾನಗಳಿಗೆ ಅಧಿಸೂಚನೆ ಹೊರಡಿಸಿ 30 ದಿನಗಳೊಳಗಾಗಿ ಸದರಿ ಸ್ಥಾನಗಳನ್ನು ತುಂಬಲು ಕ್ರಮಕೈಗೊಳ್ಳಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

ಡಾ॥ ಸುಧಾಕರ ಹೆಚ್ ಅವರು ಮಾತನಾಡಿ, ಒಂದೇ ವಿಭಾಗದಲ್ಲಿ ಸತತವಾಗಿ ಮೂರು ವರ್ಷ ಸೇವೆ ಸಲ್ಲಿಸಿರುವ ದಿನಗೂಲಿ ನೌಕರರು ಹಾಗೂ ಹೊರಗುತ್ತಿಗೆ ನೌಕರರನ್ನು ಬೇರೆಡೆಗೆ ವರ್ಗಾಯಿಸಬೇಕು. ಈ ಬಗ್ಗೆ ಪರಿಶೀಲಿಸುವುದಾಗಿ ಕುಲಪತಿಗಳು ತಿಳಿಸಿದರು.

ಉಪಸಮಿತಿ ನಾಮ ನಿರ್ದೇಶನದ ಬಗ್ಗೆ ಚರ್ಚೆ ನಡೆದು, ಡಾ॥ ಹೆಚ್. ಸುಧಾಕರ ಅವರನ್ನು ಹಾಸ್ಟೆಲ್ ಸುಧಾರಣಾ ಸಮಿತಿಯ ಸದಸ್ಯರನ್ನಾಗಿ, ಶ್ರೀ ಉದಯ ಕುಮಾರ್ ಎಂ ಅವರನ್ನು ಗ್ರಂಥಾಲಯ ಸಮಿತಿಯ ಸದಸ್ಯರನ್ನಾಗಿ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.

ಶ್ರೀ ಗೋಪಿನಾಥ್ ಅವರು ಮಾತನಾಡಿ, ಕ್ಯಾಂಪಸ್ ಸ್ವಚ್ಛತಾ ಕಾರ್ಯ ಹಮ್ಮಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳು ಸಹಕರಿಸುತ್ತಿಲ್ಲವಾದ ಕಾರಣ ಒಂದು ದಿನ ಸ್ವಚ್ಛತಾ ಆಂದೋಲನ ನಿಗದಿಪಡಿಸಲು ಸಂಬಂಧಿಸಿವರಿಗೆ ನಿರ್ದೇಶನ ನೀಡಬೇಕೆಂದು ಹಾಗೂ ವಿಶ್ವವಿದ್ಯಾಲಯ ಆವರಣದಲ್ಲಿ ಕಸ ಎಸೆಯುವುದನ್ನು ತಡೆಗಟ್ಟಲು ವಿಶ್ವವಿದ್ಯಾಲಯದ ಪ್ರಮುಖ ರಸ್ತೆ/ಸ್ಥಳಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಬೇಕೆಂದು ಹಾಗೂ ಯು.ವಿ.ಸಿ.ಇ. ಹಾಸ್ಟೆಲ್‌ನಲ್ಲಿ ಅಳವಡಿಸಿರುವ ನೀರಿನ ಕೊಳಾಯಿಗಳು ಸೋರಿಕೆಯಾಗುತ್ತಿದ್ದು, ಇವುಗಳನ್ನು ಬದಲಾಯಿಸಲು ಕ್ರಮವಹಿಸಬೇಕೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ, ಜ್ಞಾನಭಾರತಿ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲು ಹಾಗೂ ಸೂಚನಾ ಫಲಕಗಳನ್ನು ನಿಗದಿತ ಸ್ಥಳಗಳಲ್ಲಿ ಅಳವಡಿಸಲು ಹಾಗೂ ಯು.ವಿ.ಸಿ.ಇ. ಯು.ವಿ.ಸಿ.ಇ. ಹಾಸ್ಟೆಲ್‌ನ ರಿಪೇರಿ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದೆಂದು ಸದಸ್ಯರ ಗಮನಕ್ಕೆ ತಂದರು.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ವಿಶ್ವವಿದ್ಯಾಲಯ ಸೇವೆಯಿಂದ ನಿವೃತ್ತಿಯಾಗುವ ಶಿಕ್ಷಕರಿಗೆ ಸಂಬಂಧಿಸಿದ ಸೆಮಿಸ್ಟರ್ ಅವಧಿಯವರೆಗೆ ನಿವೃತ್ತಿ ಪಿಂಚಣಿ ಮೊತ್ತ ಮತ್ತು ಅವರ ಕೊನೆಯ ವೇತನ ಇದರ

ವ್ಯತ್ಯಾಸವನ್ನು ಮಾತ್ರ ಪಾವತಿಸಬೇಕು ಮತ್ತು ಅವರ ಮರು–ನೇಮಕಾತಿ ವಿಷಯವನ್ನು ಇನ್ನು ಮುಂದೆ ಸಿಂಡಿಕೇಟ್ ಮುಂದೆ ಮಂಡಿಸಿ ಅನುಮೋದನೆ ಪಡೆಯಬೇಕೆಂದು ತಿಳಿಸಿದರು. ಹಿಂದಿನ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಇನ್ನೂ ಹೊರಡಿಸಿರುವುದಿಲ್ಲ. ಪರೀಕ್ಷಾ ವಿಭಾಗದಲ್ಲಿ ನಡೆದಿರುವ ಅಂಕಪಟ್ಟಿ ಹಗರಣದ ಬಗ್ಗೆ ತನಿಖೆಯ ಪ್ರಗತಿಯ ಬಗ್ಗೆ ತಿಳಿಸಬೇಕು, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ಜಾರಿಗೊಳಿಸಲು ಆದಷ್ಟು ಬೇಗ ಕಾರ್ಯಪಡೆ ರಚಿಸಬೇಕು, ಅಕಾಡೆಮಿಕ್ ಡೆವಲಪ್‌ಮೆಂಟ್ ಸಮಿತಿಯ ಸಭೆಗೆ ಎಲ್ಲಾ ಡೀನರು ಹಾಜರಾಗಬೇಕೆಂದು ಸೂಚಿಸಬೇಕು. ಸಿಬ್ಬಂದಿ ಹಾಗೂ ಅಧಿಕಾರಿಗಳೊಂದಿಗೆ ಪರಿಚಯಿಸಲು ಸಭೆ ಆದಷ್ಟು ಬೇಗ ಕರೆಯಬೇಕು. ವಿಶ್ವವಿದ್ಯಾಲಯದ ಕೆಲವು ವಿಭಾಗಗಳಲ್ಲಿ ಶೈಕ್ಷಣಿಕ ಕಾರ್ಯಭಾರ ಇಲ್ಲದಿದ್ದರೂ ಕೂಡ ಅನಗತ್ಯವಾಗಿ ಅತಿಥಿ ಉಪನ್ಯಾಸಕರನ್ನು ನೇಮಕಗೊಂಡಿರುವ ಬಗ್ಗೆ ಪರಿಶೀಲಿಸಬೇಕು. ವಿಶ್ವವಿದ್ಯಾಲಯದ ಕಾನೂನು ಕೋಶದ ಕಾರ್ಯವನ್ನು ಹಾಗೂ ವಕೀಲರ ಪಟ್ಟಿಯನ್ನು ಪರಿಷ್ಕರಿಸಲು ಸಮಿತಿಯ ಸಭೆಯನ್ನು ಆದಷ್ಟು ಬೇಗ ಕರೆಯಬೇಕು, ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಸಿಬ್ಬಂದಿಯೊಬ್ಬರು ಏನೂ ಕೆಲಸ ನಿರ್ವಹಿಸದೇ ವೇತನ ಪಡೆಯುತ್ತಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಸೆಮಿನಾರ್ ನಡೆಸದೆಯೇ ವಿದ್ಯಾರ್ಥಿಗಳಿಂದ ಹಣಪಡೆದಿದ್ದಾರೆ. ಯು.ಜಿ.ಸಿ. ಅಕಾಡೆಮಿಕ್ ಸ್ಟಾಫ್ ಕಾಲೇಜಿನ ಕಟ್ಟಡ ಅರ್ಧಕ್ಕೆ ನಿಂತಿದ್ದು ಅದನ್ನು ಪೂರ್ಣಗೊಳಿಸಬೇಕು ಹಾಗೂ ಅಕಾಡೆಮಿಕ್ ಡೆವಲಪ್ಮೆಂಟ್ ಸಮಿತಿಯ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ನಿವೃತ್ತಿ ಹೊಂದುವ ಶಿಕ್ಷಕರ ಮರು ನೇಮಕಾತಿ ಮಾಡುವ ಬಗ್ಗೆ ವಿಶ್ವವಿದ್ಯಾಲಯದ ಪರಿನಿಯಮಾವಳಿ 21.2ನ್ನು ಉಲ್ಲೇಖಿಸಿ, ಸದರಿ ಪರಿನಿಯಮಾವಳಿಯಂತೆ ಶಿಕ್ಷಕರನ್ನು ನಿವೃತ್ತಿಯ ನಂತರ ಮರು–ನೇಮಕಾತಿಯು ಸದರಿ ಶಿಕ್ಷಕರ Physical fitness ಹಾಗೂ ಪಾವತಿಯ ಬಗ್ಗೆ ವಿಶ್ವವಿದ್ಯಾಲಯ ನಿಗದಿಪಡಿಸುವ ವೇತನ ಮೊತ್ತದ ಷರತ್ತಿಗೊಳಪಟ್ಟಿರಬೇಕಾಗುತ್ತದೆ. ಆದಕಾರಣ, ಶಿಕ್ಷಕರ ಮರು–ನೇಮಕಾತಿ ಮಾಡುವಾಗ ಅವರಿಗೆ ವೇತನ ಮೊತ್ತವನ್ನು ನಿಗದಿಪಡಿಸದೇ ಪ್ರಸ್ತುತ ರೂಢಿಯಲ್ಲಿರುವಂತೆ ಕೊನೆಯ ತಿಂಗಳ ವೇತನವನ್ನು ಮರು–ನೇಮಕಾತಿಯ ಅವಧಿಯವರೆಗೆ ಮುಂದುವರೆಸುವುದರಿಂದ ಆರ್ಥಿಕವಾಗಿ ನಷ್ಟವಾಗುತ್ತದೆ. ವಿಶ್ವವಿದ್ಯಾಲಯ ನಿಗದಿಪಡಿಸಿದ ಮೊತ್ತವನ್ನು ಮಾತ್ರ ಶಿಕ್ಷಕರು ಪಡೆದುಕೊಳ್ಳಬೇಕು. ಈ ಬಗ್ಗೆ ಪರಿನಿಯಮಾವಳಿಯನ್ನು ಸೂಕ್ತವಾಗಿ ಮಾರ್ಪಡಿಸುವುದೂ ಸಹ ಅವಶ್ಯಕತೆ ಇದೆ ಎಂದು ತಿಳಿಸಿದರು.

ಮಾನ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದಂತೆ ನಿವೃತ್ತ ಶಿಕ್ಷಕರನ್ನು ಮರು–ನೇಮಕಾತಿ ಮಾಡಲಾಗಿದೆ. ಮಧ್ಯಂತರ ಆದೇಶವನ್ನು ತೆರವುಗೊಳಿಸಲು ಹಾಗೂ ಸಂಬಂಧಿಸಿದ ಪರಿನಿಯಮಾವಳಿಗೆ ತಿದ್ದುಪಡಿ ತರಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕುಲಪತಿಗಳು ತಿಳಿಸಿದರು. ಅವರು ಮುಂದುವರೆದು, ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಕ್ರಮ ಕೈಗೊಳ್ಳಲಾಗುವುದು. ಅರ್ಹತೆ ಇಲ್ಲದ ಯಾವುದೇ ವಿದ್ಯಾರ್ಥಿಗಳಿಗೆ ಪಿ.ಹೆಚ್.ಡಿ. ನೋಂದಣಿ ನೀಡಿರುವುದಿಲ್ಲ. ಅಂಕಪಟ್ಟಿ ತಿದ್ದುಪಡಿಯ ಬಗ್ಗೆ ಈಗಾಗಲೇ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪೊಲೀಸ್ ಎಫ್.ಐ.ಆರ್. ಅನ್ನು ದಾಖಲಿಸಲಾಗಿದೆ. ಆಂತರಿಕ ವಿಚಾರಣಾ ಸಮಿತಿಯನ್ನು ಸಹ ನೇಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು. ವಿಶ್ವವಿದ್ಯಾಲಯಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಿಂದ ಮಾರ್ಗಸೂಚಿ ಬಂದನಂತರ ಕ್ರಮ ಕೈಗೊಳ್ಳಲಾಗುವುದು. ಅತಿಥಿ ಉಪನ್ಯಾಸಕರನ್ನು ಅಧಿಕವಾಗಿ ನೇಮಿಸಿಕೊಂಡಿರುವ ಪ್ರಕರಣಗಳು ಇದ್ದರೆ ಪ್ರೊ. ಟಿ.ವಿ. ರಾಜು ಅವರು ಪರಿಶೀಲಿಸಿ ವರದಿ ನೀಡಬಹುದು. ಸಿಂಡಿಕೇಟ್ ಉಪಸಮಿತಿಗಳ ಸಭೆಗಳಲ್ಲಿ ಭಾಗವಹಿಸಲು ಹಾಗೂ ಸಿಬ್ಬಂದಿಗಳೊಂದಿಗೆ ಸಿಂಡಿಕೇಟ್ ಸದಸ್ಯರುಗಳ ಪರಿಚಯ ಸಭೆ ನಡೆಸಲು ಸೂಚಿಸಲಾಗುವುದು.

ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಈ-ಆಫೀಸ್ ಜಾರಿಗೊಳಿಸಲು ತುರ್ತು ಕ್ರಮ ಕೈಗೊಳ್ಳಬೇಕು. ಸಿಂಡಿಕೇಟ್ ಸದಸ್ಯರುಗಳು ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದು, ವಿಶ್ವವಿದ್ಯಾಲಯದಲ್ಲಿ ಖಾಲಿ ಉಳಿದಿರುವ ಶಿಕ್ಷಕ ಹಾಗೂ ಶಿಕ್ಷಕೇತರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಚರ್ಚಿಸಿದ್ದೇವೆ. ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಶಿಕ್ಷಕರ ನೇಮಕಾತಿ ಕುರಿತು ಆಗುವ ವೆಚ್ಚವನ್ನು ಆ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದಲೇ, ಭರಿಸುವುದಾಗಿ ಮುಚ್ಚಳಿಕೆ ನೀಡಿದೆ. ಅದೇ ರೀತಿ ಬೆಂಗಳೂರು ವಿಶ್ವವಿದ್ಯಾಲಯವು ಆಂತರಿಕ ಸಂಪನ್ಮೂಲದಿಂದ ಖಾಲಿ ಹುದ್ದೆಗಳ ನೇಮಕಾತಿ ವೆಚ್ಚವನ್ನು ಭರಿಸುವುದಾಗಿ ಪತ್ರ ಸಲ್ಲಿಸಿದಲ್ಲಿ. ಖಾಲಿ ಉಳಿದಿರುವ ಶಿಕ್ಷಕ ಹಾಗೂ ಶಿಕ್ಷಕೇತರ ಹುದ್ದೆಗಳ ನೇಮಕಾತಿಗೆ ಸುಲಭವಾಗಿ ಅನುಮತಿ ದೊರಕಬಹುದು ಎಂದು ತಿಳಿಸಿದರು. ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ನಡೆಯುವ ಖರೀದಿ ಪ್ರಕ್ರಿಯೆಯನ್ನು ಕೇಂದ್ರೀಕರಿಸುವ ದೃಷ್ಟಿಯಿಂದ Procurement Cell ಪ್ರಾರಂಭಿಸಬೇಕು. ಮುಂದಿನ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದ ನಿಮಿತ್ತ ಮಾಡಬೇಕಾದ ಏರ್ಪಾಟುಗಳಿಗೆ ಊಟದ ವ್ಯವಸ್ಥೆ ಸೇರಿ ಈಗಲೇ ಟೆಂಡರ್ ಕರೆಯಲು ಹಾಗು ಹಾಸ್ಟೆಲ್‌ಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ತಿಳಿಸಿದರು.

ಡಾ॥ ಗೋವಿಂದರಾಜು ಅವರು ಮಾತನಾಡಿ ವಿಶ್ವವಿದ್ಯಾಲಯದ ಜಮೀನನ್ನು ಬೇರೆ ಸಂಸ್ಥೆಗಳಿಗೆ ನೀಡಿರುವ ಬಗ್ಗೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ವಿಶ್ವವಿದ್ಯಾಲಯ ಸಲ್ಲಿಸುವ Statement of Objection ಅಂಶಗಳನ್ನು ಸಿಂಡಿಕೇಟ್ ಗಮನಕ್ಕೆ ತರಬೇಕೆಂದು ತಿಳಿಸಿದರು.

ಸಿಂಡಿಕೇಟ್ ಕೆಳಕಂಡ ವಿಷಯಗಳನ್ನು ಮಾತ್ರ ಚರ್ಚೆಗೆ ತೆಗೆದುಕೊಂಡಿತು ಹಾಗೂ ಉಳಿದ ವಿಷಯ ಸೂಚಿಗಳನ್ನು ಮುಂದೂಡಿತು.

## 158ನೇ ಸಿಂಡಿಕೇಟ್ ಸಭೆಯಲ್ಲಿ ಮುಂದೂಡಲ್ಪಟ್ಟ ವಿಷಯಗಳು

***Proceedings of the 158th Adjourned meeting of the Syndicate held on 14.07.2021***

**ವಿಷಯ ಸಂಖ್ಯೆ 1:** ದಿನಾಂಕ 20.02.2021 ರಂದು ಜರುಗಿದ 156ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 24.03.2021 ರಂದು ನಡೆದ 157ನೇ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ 2020-21ನೇ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನುಸಾರ ಸುಮಾರು 23 ಸಂಯೋಜಿತ ಕಾಲೇಜುಗಳು ಶೇಕಡಾ 40ಕ್ಕಿಂತ ಕಡಿಮೆ ಅಂಶಗಳನ್ನು ಪಡೆದಿದ್ದು, ಈ ಕಾಲೇಜುಗಳಿಗೆ ಇಲ್ಲಿಯವರೆಗೂ ಸಂಯೋಜನಾ ನವೀಕರಣ ನೀಡಿರುವುದಿಲ್ಲ, ಸರ್ಕಾರದ ಆದೇಶ ಸಂಖ್ಯೆ ಇಡಿ 29 ಯುಎನ್‌ಇ 2021 ದಿನಾಂಕ: 12-02-2021 / 16-02-2021 ರಲ್ಲಿ ಸಂಯೋಜನಾ ನವೀಕರಣ ವಿದ್ಯಾರ್ಥಿ ಪ್ರಮಾಣ ಹೆಚ್ಚಳದ ಬಗ್ಗೆ ವಿಶ್ವವಿದ್ಯಾಲಯದ ಮಿತಿಯಲ್ಲೇ ಕ್ರಮತೆಗೆದುಕೊಳ್ಳಬೇಕೆಂದು ನಿರ್ದೇಶಿಸಿದೆ. ಆದ್ದರಿಂದ ಈ ಕಾಲೇಜುಗಳ ಪೈಕಿ ಕೆಲವೊಂದು ಕಾಲೇಜುಗಳು

ಉತ್ತಮ ಸೌಲಭ್ಯ ಹೊಂದಿರಬಹುದು. ಅಂತಹ ಕಾಲೇಜುಗಳನ್ನು ಮಾತ್ರ ಸಂಯೋಜನಾ ನವೀಕರಣಕ್ಕೆ ಪರಿಗಣಿಸಬೇಕೆಂದು ತಿಳಿಸಿದರು. ಶ್ರೀ ಉದಯ ಕುಮಾರ್ ಎಂ ಅವರು ಅಭಿಪ್ರಾಯ ವ್ಯಕ್ತಪಡಿಸಿ, ಕೆಲವು ಕಾಲೇಜುಗಳು ಮೂಲ ಸೌಕರ್ಯಗಳನ್ನು ಹೊಂದಿಲ್ಲ. ಈ ಎಲ್ಲಾ ಕಾಲೇಜುಗಳನ್ನು Re-inspection ಮಾಡಿಸಬೇಕು. ಪ್ರತಿ ಸ್ಥಳೀಯ ವಿಚಾರಣಾ ಸಮಿತಿಗೆ ಎರಡು ಕಾಲೇಜುಗಳನ್ನು ವಹಿಸಿದರೆ ಬೇಗ ಮರು–ಪರಿವೀಕ್ಷಣೆ ಮುಗಿಯುತ್ತದೆ. ನಂತರ ಕ್ರಮ ತೆಗೆದುಕೊಳ್ಳಬಹುದಾಗಿದೆಯೆಂದರು.

ಸದರಿ 23 ಕಾಲೇಜುಗಳ ಪೈಕಿ ಕೆಲವು ಕಾಲೇಜುಗಳು 2019–20ರಲ್ಲಿ ಪ್ರಾರಂಭಗೊಂಡಿವೆ. ಸಂಯೋಜನೆ ನೀಡುವಲ್ಲಿ ತಡವಾದ ಕಾರಣ, ಪ್ರವೇಶಾತಿ ನಡೆದಿರುವುದಿಲ್ಲ. ಆದಕಾರಣ, ಪರೀಕ್ಷಾ ಫಲಿತಾಂಶಕ್ಕೆ ಸಂಬಂಧಿಸಿದ Parameter ಅಂತಹ ಕಾಲೇಜುಗಳಿಗೆ ಅನ್ವಯಿಸುವುದಿಲ್ಲ. ಈ ಕಾರಣ ಅವರಿಗೆ ನಿಗದಿಯಂತೆ ಶ್ರೇಯಾಂಕ ಬರುವುದಿಲ್ಲ. ಹೊಸದಾಗಿ ಪ್ರಾರಂಭವಾದ ಕಾಲೇಜುಗಳಿಗೆ ಮೂಲ ಸೌಕರ್ಯ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ಉತ್ತಮ ಪಡಿಸಿಕೊಳ್ಳಲು ಪ್ರಾರಂಭದಲ್ಲಿ ಕನಿಷ್ಠ ಮೂರು ವರ್ಷಗಳ ಕಾಲಾವಕಾಶ ನೀಡಬೇಕಾಗುತ್ತದೆ. ಅದರೆ, ಕಳೆದ ಆರು/ಏಳು ವರ್ಷಗಳಿಂದ ಕೆಲವು ಕಾಲೇಜುಗಳು ಸತತವಾಗಿ ಕಡಿಮೆ ಅಂಕ ಪಡೆದಿದ್ದರೂ ಸಹ ಇದೇ ರೀತಿ ಸಂಯೋಜನೆಯನ್ನು ಮುಂದುವರೆಸಲಾಗಿದೆ. ಅಂತಹ ಕಾಲೇಜುಗಳನ್ನು ಹೊರತುಪಡಿಸಿ ಹೊಸದಾಗಿ ಪ್ರಾರಂಭಗೊಂಡಿರುವ ಕಾಲೇಜುಗಳ ಸಂಯೋಜನೆಯನ್ನು ಮುಂದುವರೆಸಬಹುದಾಗಿದೆಯೆಂದು ಸದಸ್ಯರಿಂದ ಅಭಿಪ್ರಾಯ ವ್ಯಕ್ತವಾಯಿತು.

ಕುಲಪತಿಗಳು ಉತ್ತರಿಸಿ 2020–21ನೇ ಸಾಲಿನ ಸಂಯೋಜನಾ ಪ್ರಕ್ರಿಯೆಯು ಮಾರ್ಚ್ 2020ರೊಳಗೆ ಮುಗಿಯಬೇಕಾಗಿತ್ತು. ಒಂದು ವರ್ಷ ತಡವಾಗಿ ನೆರವೇರಿಸಲಾಗಿದೆ. Retrospective ಆಗಿ ಸಂಯೋಜನೆಯನ್ನು ರದ್ದುಪಡಿಸುವುದು ಸರಿಯಾದ ಕ್ರಮವಲ್ಲ. ಕೋವಿಡ್–19 ಹಾಗೂ ಲಾಕ್ ಡೌನ್ ಕಾರಣ ಕಾಲೇಜುಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಕುಂಠಿತವಾಗಿವೆ. ಈ ಕಾರಣದಿಂದ ಕೆಲವು ಕಾಲೇಜುಗಳು ನಿಗದಿತ ಅಂಕಗಳನ್ನು ಪಡೆಯದಿರಬಹುದು. ಆದಕಾರಣ, ಶೇಕಡಾ 40ಕ್ಕಿಂತ ಕಡಿಮೆ ಅಂಕಪಡೆದಿರುವ ಈ 23 ಕಾಲೇಜುಗಳಿಗೆ 2021–22ನೇ ಸಾಲಿನ ಸಂಯೋಜನಾ ಪರಿವೀಕ್ಷಣೆ ಸಮಯದಲ್ಲಿ ಶೇಕಡಾ 40 ಕನಿಷ್ಠ ಅಂಗಳನ್ನು ಕಡ್ಡಾಯವಾಗಿ ಪಡೆಯದಿದ್ದರೆ, ಮೂಲ ಸೌಕರ್ಯಗಳು Improve ಆಗಿಲ್ಲದಿದ್ದರೆ, ಅಂತಹ ಕಾಲೇಜುಗಳ ಸಂಯೋಜನೆ ರದ್ದುಪಡಿಸಲಾಗುವುದು ಎಂಬ ಷರತ್ತಿಗೊಳಪಟ್ಟು, ಸಂಯೋಜನಾ ನವೀಕರಣ ನೀಡಬಹುದೆಂದು ತಿಳಿಸಿದರು.

ದೀರ್ಘ ಚರ್ಚೆಯ ನಂತರ 20–02–2021ರ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಮಾರ್ಪಡಿಸಿ, ಮೇಲ್ಕಂಡ ಷರತ್ತಿನೊಂದಿಗೆ ಈ 23 ಕಾಲೇಜುಗಳಿಗೆ 202021ನೇ ಸಾಲಿಗೆ ಸಂಯೋಜನೆ ನವಿಕರಣ ನೀಡಿ, 2021–22ನೇ ಸಾಲಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲು ಸಿಂಡಿಕೇಟ್ ತೀರ್ಮಾನಿಸಿತು.

ಮುಂದುವರೆದು, 2020–21ನೇ ಸಾಲಿನಲ್ಲಿ ಹೊಸ ಸಂಯೋಜನೆಗೆ ಅರ್ಜಿ ಸಲ್ಲಿಸಿ, ಇನ್ನೂ ಪರಿವೀಕ್ಷಣೆಯಾಗದ ಕಾಲೇಜುಗಳ ಪೈಕಿ, NBC ಮತ್ತು Fire safety ಪ್ರಮಾಣ ಪತ್ರ ಸಲ್ಲಿಸುವ ಕಾಲೇಜುಗಳಿಂದ ಪರಿಷ್ಕೃತ ಅರ್ಜಿಯನ್ನು ಪಡೆದುಕೊಂಡು, 2021–22ನೇ ಸಾಲಿಗೆ ಪರಿವೀಕ್ಷಣೆ ನಡೆಸಲು ಸಿಂಡಿಕೇಟ್ ಅನುಮೋದಿಸಿತು.

ಮೇಲ್ಕಂಡ ಚರ್ಚೆ ಮತ್ತು ನಿರ್ಣಯಗಳೊಂದಿಗೆ ದಿನಾಂಕ 20.02.2021 ರಂದು ಜರುಗಿದ 156ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 24.03.2021 ರಂದು ನಡೆದ 157ನೇ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ಸಿಂಡಿಕೇಟ್ ಅನುಮೋದಿಸಿ ಸ್ಥಿರೀಕರಿಸಿತು.

***Proceedings of the 158th Adjourned meeting of the Syndicate held on 14.07.2021***

**ವಿಷಯ ಸಂಖ್ಯೆ 2:** ದಿನಾಂಕ 20.02.2021 ರಂದು ಜರುಗಿದ 156ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 24.03.2021 ರಂದು ನಡೆದ 157ನೇ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ನಡಾವಳಿಗಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳು (ATR).

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 20.02.2021 ರಂದು ಜರುಗಿದ 156ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 24.03.2021 ರಂದು ನಡೆದ 157ನೇ ಸಿಂಡಿಕೇಟ್ ಸಭೆಗಳ ನಡಾವಳಿಗಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿ (ATR) ಗಳನ್ನು ಕೆಳಕಂಡ ಚರ್ಚೆ ಹಾಗೂ ನಿರ್ಣಯಗಳೊಂದಿಗೆ ಸಿಂಡಿಕೇಟ್ ಅನುಮೋದಿಸಿತು.

1. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, 157ನೇ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ 21ರಲ್ಲಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಿರುವ ಇಬ್ಬರು ಶುಶ್ರೂಷಕಿಯರುಗಳ ಸೇವೆಯ ಅವಧಿಯನ್ನು ಬರೀ ಆರು ತಿಂಗಳು ಅವಧಿಗೆ ನೇಮಿಸಲಾಗಿದೆ. ಅವರ ಅವಧಿ ಈಗಾಗಲೇ ಮುಗಿದಿರುವುದರಿಂದ ಆರು ತಿಂಗಳ ಬದಲು ಒಂದು ವರ್ಷದ ಅವಧಿಗೆ ಮುಂದುವರೆಸಿ ಪ್ರಸ್ತುತ ಜಾರಿಯಲ್ಲಿರುವ ಡಿ.ಎ. ಮತ್ತು ಹೆಚ್.ಆರ್.ಎ. ದರದಲ್ಲಿ ಶೇಕಡಾ 75ರಷ್ಟು ಅವರಿಗೆ ಮಂಜೂರು ಮಾಡಬೇಕೆಂದು ಕೋರಿದರು. ಮತ್ತೊಬ್ಬ ಸದಸ್ಯರು ಮಾತನಾಡಿ, ಸದ್ಯಕ್ಕೆ ಅವರ ಅವಧಿಯನ್ನು ಆರುತಿಂಗಳ ಬದಲು ಒಂದು ವರ್ಷಕ್ಕೆ ಮುಂದುವರೆಸಬಹುದಾಗಿದೆ ಎಂದು ತಿಳಿಸಿದರು.

   ಚರ್ಚೆಯ ನಂತರ ಬೆಂಗಳೂರು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಇಬ್ಬರು ಶುಶ್ರೂಷಕಿಯರುಗಳ ಸೇವೆಯನ್ನು ಅವರ ಸೇವೆಯ ಹಿಂದಿನ ಅವಧಿ ಮುಗಿದ ದಿನಾಂಕದಿಂದ ಮೂರು ದಿನಗಳ ಬಿಡುವು ನೀಡಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.

2. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದ ವಿಭಾಗ ಹಾಗೂ ಕಛೇರಿಗಳಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಣೆ ಸಂಬಂಧಪಟ್ಟಂತೆ 15 ದಿನಗಳ ಒಳಗಾಗಿ ನೂತನ Short term Tender ಕರೆದು ಎರಡು ತಿಂಗಳ ಒಳಗೆ ಟೆಂಡರ್ ಪ್ರಕ್ರಿಯೆಯ ಪೂರ್ಣಗೊಳಿಸಿ, ನೂತನ ಗುತ್ತಿಗೆದಾರರನ್ನು ಆಯ್ಕೆ ಮಾಡಬೇಕೆಂದು ನಿರ್ಣಯಿಸಲಾಗಿತ್ತು. ಆದರೆ, ಇಲ್ಲಿಯವರೆಗೂ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸದೇ

ನಿಧಾನಗೊಳಿಸಿ, ಹಿಂದಿನ ಗುತ್ತಿಗೆದಾರರನ್ನೇ ನಿಯಮ ಮೀರಿ ಮುಂದುವರಿಸಿ ಬಿಲ್ ಪಾವತಿ ಮಾಡಲಾಗುತ್ತಿದೆ. ಆದ್ದರಿಂದ Short term Tender ಅನ್ನು ಕೂಡಲೇ ಕರೆಯಲು ತಿಳಿಸಿದರು.

ಕುಲಪತಿಗಳು ಉತ್ತರಿಸಿ, ಇನ್ನು ಹದಿನೈದು ದಿನಗಳ ಒಳಗಾಗಿ Short term Tender ಅನ್ನು ಕರೆಯಲಾಗುವುದು ಎಂದು ತಿಳಿಸಿದರು.

3. ಡಾ॥ ಗೋವಿಂದರಾಜು ಅವರು ಮಾತನಾಡಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ.ಗೆ ವಿಶ್ವವಿದ್ಯಾಲಯದ ಆವರಣದಲ್ಲಿ ಜಮೀನು ಕೊಡುವುದು ಬೇಡ. ಎಸ್.ಟಿ.ಪಿ. ಸ್ಥಾವರ ನಿರ್ಮಾಣ ಮಾಡುವುದರಿಂದ ವಿಶ್ವವಿದ್ಯಾಲಯದ ಆವರಣದಲ್ಲಿನ ಅಂತರ್-ಜಲ ಕಲುಷಿತಗೊಳ್ಳುವುದು. ಆದಕಾರಣ ಜಮೀನು ನೀಡುವುದು ಬೇಡವೆಂದು ತಿಳಿಸಿದರು ಹಾಗೂ ಕಳೆದ ಸಿಂಡಿಕೇಟ್ ಸಭೆಯಲ್ಲಿ ಆಯ-ವ್ಯಯ ಅಂದಾಜುಗಳ ಅನುಮೋದನೆ ಸಂದರ್ಭದಲ್ಲಿ ವಿದ್ಯಾರ್ಥಿಗಳ ಕೌಶಲಾಭಿವೃದ್ಧಿ ಮತ್ತು ಇತರ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅನುದಾನವನ್ನು ಒದಗಿಸಲು ಕೋರಿದರು.

ಕುಲಪತಿಗಳು ಉತ್ತರಿಸಿ, ಸರ್ಕಾರದಿಂದ ಆದೇಶ ಬಂದರೆ, ಆದೇಶಾನುಸಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ವಿಷಯದ ಬಗ್ಗೆ ಸಿಂಡಿಕೇಟ್ ಸಭೆಯ ಮುಂದೆ ಪ್ರತ್ಯೇಕ ಪರಾಮರ್ಶಿತ ಟಿಪ್ಪಣಿಯನ್ನು ವಿಷಯ ಸಂಖ್ಯೆ:25ರಲ್ಲಿ ಮಂಡಿಸಲಾಗಿದೆ. ವಿಷಯವನ್ನು ಚರ್ಚೆಗೆ ತೆಗೆದುಕೊಂಡಾಗ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಬಹುದಾಗಿದೆ. ವಿಶ್ವವಿದ್ಯಾಲಯದಲ್ಲಿ ಹಣದ ಕೊರತೆ ಇರುವುದಿಲ್ಲ. ಒಳ್ಳೆಯ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದಾಗಿ ತಿಳಿಸಿದರು.

4. ಎನ್.ಎಸ್.ಎಸ್. ವಿಭಾಗದಲ್ಲಿ ಕಳೆದ 20 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಪ್ರಸನ್ನ ಎ.ಎಂ.ಆರ್. ಇವರನ್ನು ಹಿಂದಿನ ಕುಲಪತಿಗಳ ಅವಧಿಯಲ್ಲಿ ದಿನಗೂಲಿ ನೌಕರರ ಪಟ್ಟಿಗೆ ಸೇರಿಸಬೇಕೆಂದು ನಿರ್ಣಯಿಸಲಾಗಿತ್ತು. ಆದರೂ ಕೂಡ ಇವರ ಹೆಸರನ್ನು ದಿನಗೂಲಿ ನೌಕರರ ಪಟ್ಟಿಗೆ ಸೇರಿಸಿರುವುದಿಲ್ಲವೆಂದು ಡಾ॥ ಸುಧಾಕರ ಹೆಚ್ ಅವರು ತಿಳಿಸಿದರು.

ಮೇಲ್ಕಂಡ ನೌಕರರ ಸೇವಾ ವಿವರದ ಬಗ್ಗೆ ಪರಿಶೀಲಿಸಿ ಮುಂದಿನ ಸಿಂಡಿಕೇಟ್ ಸಭೆಗೆ ವಿವರವನ್ನು ಮಂಡಿಸಲಾಗುವುದು ಎಂದು ಸಿಂಡಿಕೇಟ್ ಗಮನಕ್ಕೆ ತರಲಾಯಿತು.

5. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಈ ಹಿಂದೆ ಮಾಡಿದ ವ್ಯವಸ್ಥೆಯಂತೆ ಇಸ್ಕಾನ್ ಸಂಸ್ಥೆಯಿಂದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಬೇಕು. ಅವಶ್ಯವಿದ್ದಲ್ಲಿ ಈ ಬಗ್ಗೆ ಟೆಂಡರ್ ಸಹ ಕರೆಯಬಹುದಾಗಿದೆ. ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದ ಸ್ವೀಕೃತಿಗಳನ್ನು ಎಸ್.ಬಿ.ಐ. ಬ್ಯಾಂಕ್ ಮುಖಾಂತರ ನಿರ್ವಹಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಒಂದು ಸಮಿತಿಯನ್ನು ರಚಿಸಲಾಗಿತ್ತು. ಇಲ್ಲಿಯವರೆಗೆ ಸಭೆ ಕರೆದಿರುವುದಿಲ್ಲವೆಂದು ತಿಳಿಸಿದರು.

ಕುಲಪತಿಯವರು ಮಾತನಾಡಿ, ಇಸ್ಕಾನ್ ಸಂಸ್ಥೆಯೊಂದಿಗೆ ಚರ್ಚಿಸಲಾಗುವುದು ಹಾಗೂ ಮುಂದಿನ ಸಿಂಡಿಕೇಟ್ ಸಭೆಗೆ ವಿವರವಾದ ಟಿಪ್ಪಣಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗುವುದು ಹಾಗೂ ಎಸ್.ಬಿ.ಐ. ಬ್ಯಾಂಕ್ ಮುಖಾಂತರ ಸ್ವೀಕೃತಿಯನ್ನು ನಿರ್ವಹಿಸುವ ಬಗ್ಗೆ ರಚಿಸಲಾದ ಸಮಿತಿಯ ಸಭೆಯನ್ನು ಆದಷ್ಟು ಬೇಗ ಕರೆಯಲಾಗುವುದು ಎಂದು ತಿಳಿಸಿದರು.

6. ಶ್ರೀ ಉದಯ ಕುಮಾರ್ ಎಂ ಮತ್ತು ಶ್ರೀ ಪ್ರೇಮ್ ಸೋಹನ್ ಲಾಲ್ ಅವರುಗಳು ಮಾತನಾಡಿ, ರಾಮನಗರ ಸ್ನಾತಕೋತ್ತರ ಕೇಂದ್ರಕ್ಕೆ ಮಂಜೂರಾಗಿರುವ ಎರಡು ಎಕರೆ ಜಮೀನಿಗೆ ಕಾಂಪೌಂಡ್ ನಿರ್ಮಿಸಿ, ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ, ರಾಮನಗರ ಜಿಲ್ಲಾಡಾಳಿತದಿಂದ ಸದರಿ ಎರಡು ಎಕರೆ ಜಮೀನನ್ನು ವಿಶ್ವವಿದ್ಯಾಲಯದ ಹೆಸರಿಗೆ ಖಾತೆ ಮಾಡಿರುವ ಬಗ್ಗೆ ಪತ್ರ ಬಂದ ಮೇಲೆ ಕ್ರಮ ಕೈಗೊಳ್ಳಲಾಗುವುದು.

7. ಡಾ॥ ಸುಧಾಕರ ಹೆಚ್ ಮತ್ತು ಶ್ರೀ ಉದಯ ಕುಮಾರ್ ಎಂ ಅವರುಗಳು ಮಾತನಾಡಿ, ಶ್ರೀ ಆಂಜಲಪ್ಪ, ದಿನಗೂಲಿ ನೌಕರರು ಇವರ ಸೇವೆಯನ್ನು ಖಾಯಮಾತಿ ಮಾಡುವ ಬಗ್ಗೆ ವಿಷಯವನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಬೇಕೆಂದರು.

ಕುಲಸಚಿವರು ಮಾತನಾಡಿ ಈ ವಿಷಯವಾಗಿ ಪರಾಮರ್ಶಿತ ಟಿಪ್ಪಣಿ ಸಿದ್ಧವಾಗಿದೆ. ಮುಂದಿನ ಸಿಂಡಿಕೇಟ್ ಮುಂದೆ ಮಂಡಿಸಲಾಗುವುದು ಎಂದು ತಿಳಿಸಿದರು.

8. ಡಾ॥ ಸುಧಾಕರ ಹೆಚ್ ಹಾಗೂ ಇತರ ಸದಸ್ಯರು ಮಾತನಾಡಿ, ದಿನಾಂಕ: 04–05–2021ರ ವಿಶೇಷ ಸಿಂಡಿಕೇಟ್ ಸಭೆ ಹಾಗೂ ದಿನಾಂಕ:19–05–2021ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಈಗ ಪ್ರಸ್ತುತ ಆಗಿರುವ 32 ಬ್ಯಾಕ್–ಲಾಗ್ ಹುದ್ದೆಗಳ ನೇಮಕಾತಿ ಬಗ್ಗೆ ನಿವೃತ್ತ ನ್ಯಾಯಾಧೀಶರಿಂದ ತನಿಖೆಯಾಗಬೇಕೆಂದು ನಿರ್ಣಯಿಸಲಾಗಿತ್ತು ಹಾಗೂ ಈಗಾಗಲೇ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುವ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಜರುಗಿಸಲು ನಿರ್ಣಯಿಸಲಾಗಿತ್ತು. ಈ ಬಗ್ಗೆ ಆದ ಪ್ರಗತಿಯ ಬಗ್ಗೆ ವಿವರ ಬಯಸಿದರು.

ಕುಲಪತಿಗಳು ಉತ್ತರಿಸಿ, ದಿನಾಂಕ: 04–05–2021ರ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವ ಬಗ್ಗೆ ತೆಗೆದುಕೊಂಡ ತೀರ್ಮಾನ ಹಾಗೂ ಈ ನ್ಯಾಯಾಂಗ ತನಿಖೆಯನ್ನು ನಡೆಸಲು ಅವಕಾಶವಿಲ್ಲದಿರುವ ಬಗ್ಗೆ ಕಾನೂನು ಅಭಿಪ್ರಾಯ ಹಾಗೂ ನನ್ನ ಟಿಪ್ಪಣಿಯೊಂದಿಗೆ ನಡಾವಳಿಯನ್ನು ಹೊರಡಿಸಲಾಗಿದೆ ಮತ್ತು ದಿನಾಂಕ:19–05–2021ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ನ್ಯಾಯಾಂಗ ತನಿಖೆ ಬದಲಾಗಿ Fact Finding Committee ಮಾಡಬೇಕೆಂದು ಎಂಟು ಜನ ಸದಸ್ಯರು ಒತ್ತಾಯಿಸಿ ಸಭೆಯ ನಂತರ ಎಂಟು ಜನ ಸದಸ್ಯರು ಸಹ ಪತ್ರವನ್ನು ಸಲ್ಲಿಸಿರುತ್ತಾರೆ. ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 8ರ ಪ್ರಕಾರ ತನಿಖಾ ಸಮಿತಿಯನ್ನು ಘನತೆವೆತ್ತ ರಾಜ್ಯಪಾಲರು ಸ್ವತಃ ಅಥವಾ ಸರ್ಕಾರದ ಶಿಫಾರಸ್ಸಿನ ಮೇರೆಗೆ ಮಾಡಬೇಕಾಗುತ್ತದೆ. ಸರ್ಕಾರದ ಮಟ್ಟದಲ್ಲಿ ಈಗಾಗಲೇ ಈ ಕುರಿತು ಒಂದು ಸಮಿತಿಯು ರಚನೆಯಾಗಿದೆ.ಆದಕಾರಣ, Fact Finding Committee ಸಮಿತಿ ನೇಮಕ ಮಾಡಲು ಸಿಂಡಿಕೇಟ್‌ಗೆ ಅವಕಾಶವಿರುವುದಿಲ್ಲ. ನಡಾವಳಿ ಅಂತಿಮಗೊಳಿಸಿದ ನಂತರ ಈ ಕುರಿತು ಸದಸ್ಯರಿಗೆ ಹಿಂಬರಹ ನೀಡಲಾಗುವುದು. ಸದಸ್ಯರು ಮೇಲ್ಕಂಡ ಸಿಂಡಿಕೇಟ್ ಸಭೆಗಳಲ್ಲಿ ಸದರಿ ವಿಷಯದ ಬಗ್ಗೆ ನಡೆದ ಚರ್ಚೆ, ನಿರ್ಣಯವನ್ನು ಸರ್ಕಾರದ ಗಮನಕ್ಕೆ ತರಲಾಗುವುದು. ಸದಸ್ಯರು ಸಹ ಬೇಕಾದರೆ ಸರ್ಕಾರಕ್ಕೆ ಸಮಿತಿ ರಚಿಸುವ ಕುರಿತು ಮನವಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

ಡಾ॥ ಸುಧಾಕರ ಹೆಚ್ ಮುಂದುವರೆದು ಮಾತನಾಡಿ, ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುವ ವಿಭಾಗಗಳ ಬ್ಯಾಕ್‌ಲಾಗ್ ಹುದ್ದೆಗಳಿಗೆ ನೇಮಕಾತಿ ಮಂಡಳಿ ಸಭೆ ನಡೆಸಿ ಷರತ್ತುಬದ್ಧ ಆದೇಶ ಹೊರಡಿಸಬೇಕೆಂದು ಒತ್ತಾಯಿಸಿದರು.

ಕುಲಪತಿಗಳು ಉತ್ತರಿಸಿ, ಪ್ರಸ್ತುತ ಸರ್ವೋಚ್ಚ ನ್ಯಾಯಾಲಯದ ಮಧ್ಯಂತರ ಆದೇಶ ಇರುವುದರಿಂದ, ಮಧ್ಯಂತರ ಆದೇಶ ತೆರವುಗೊಳ್ಳುವ ವರೆಗೆ ಬ್ಯಾಕ್‌ಲಾಗ್ ಹುದ್ದೆಗಳಿಗೆ ಸಂಬಂಧಿಸಿದಂತೆ ಯಾವುದೇ ನೇಮಕಾತಿ ಮಂಡಳಿ ಸಭೆ ನಡೆಸುವುದಿಲ್ಲವೆಂದು ಸ್ಪಷ್ಟಪಡಿಸಿದರು.

*Proceedings of the 158th Adjourned meeting of the Syndicate held on 14.07.2021*

**Item No. 45:** To consider Inclusion/Correction/Addition/ Deletion towards sanctioning of Examination Allowances/Remunerations for all UG & PG courses and also supporting Staff and other details at Receiving Centre, Scanning Centre & Valuation Centres for Digital Valuation System-reg.

Sri Prem Sohanlal opined that the outsourcing of scanning work is not feasible as it is a confidential work and it should be done by the permanent employees of the Bangalore University.

***Resolution:***

After detailed discussion, the Syndicate resolved to approve the revised remuneration related to examination as per the agenda note and to defer the consideration of outsourcing of scanning work as it is a confidential work.

*Proceedings of the 158th Adjourned meeting of the Syndicate held on 14.07.2021*

**ವಿಷಯ ಸಂಖ್ಯೆ 48:** ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಈ ಕೆಳಕಂಡ ವಿಭಾಗಗಳಿಗೆ ಆ ವಿಭಾಗಗಳಿಗೆ ಎದುರಾಗಿ ನಮೂದಿಸಿರುವ ಶಿಕ್ಷಕರುಗಳನ್ನು ಎರಡು ವರ್ಷಗಳ ಅವಧಿಗೆ ವಿಶ್ವವಿದ್ಯಾಲಯವು ಆದೇಶ ಹೊರಡಿಸುವ ದಿನಾಂಕದಿಂದ ಅಧ್ಯಕ್ಷರನ್ನಾಗಿ / ಕೋ–ಆರ್ಡಿನೇಟರ್/ಪ್ರಾಂಶುಪಾಲರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಅನುಮೋದಿಸಿತು.

| ಕ್ರ.ಸಂ. | ವಿಭಾಗ | ಶಿಕ್ಷಕರ ಹೆಸರು |
|---|---|---|
| 1. | ಸಮಾಜಶಾಸ್ತ್ರ ವಿಭಾಗ | ಡಾ॥ ಸಿ. ಸೋಮಶೇಖರ್, ಪ್ರಾಧ್ಯಾಪಕರು |
| 2. | ಸಸ್ಯಶಾಸ್ತ್ರ ವಿಭಾಗ | ಡಾ॥ ಸಿ. ಮಾಯ, ಪ್ರಾಧ್ಯಪಕರು |
| 3. | ಇತಿಹಾಸ ವಿಭಾಗ | ಡಾ॥ ಕೆ.ಎಸ್. ವಿಜಯಲಕ್ಷ್ಮಿ, ಪ್ರಾಧ್ಯಪಕರು |
| 4. | ಭೋಗೋಳಶಾಸ್ತ್ರ ವಿಭಾಗ | ಡಾ॥ ಅಶೋಕ್ ಡಿ ಹಂಜಗಿ |
| 5. | ಸಿ.ಬಿ.ಎಸ್.ಎಂ.ಎಸ್. ವಿಭಾಗ | ಡಾ॥ ಸಿಂತಿಯಾ ಮೆನೇಜಸ್ |
| 6. | ದೈಹಿಕ ಶಿಕ್ಷಣ ಕಾಲೇಜು | ಡಾ॥ ಅಮರ್‌ನಾಥ್ ಕೈ.ಕೆ. |

ಮುಂದುವರೆದು, ಡಾ॥ ಟಿ.ಜಿ. ಉಮೇಶ್ ಅವರು ಪ್ರಭಾರ ಅಧ್ಯಕ್ಷರಾಗಿ ನಿರ್ವಹಿಸಿದ ಕಾರ್ಯಾವಧಿಯನ್ನು ಪೂರ್ಣ ಪ್ರಮಾಣದ ಅಧ್ಯಕ್ಷರ ಕಾರ್ಯಾವಧಿ ಎಂದು ಪರಿಗಣಿಸಲು ಸಹ ಸಿಂಡಿಕೇಟ್ ನಿರ್ಣಯಿಸಿತು.

## GENERAL DISCUSSIONS:-

1. ಕುಲಪತಿಗಳು ಮಾತನಾಡಿ, 15 ಆಗಸ್ಟ್ 2021ರಂದು ಜರುಗಲಿರುವ ಸ್ವಾತಂತ್ರ್ಯೋತ್ಸವ ದಿನಾಚಾರಣೆಯಂದು ದೊಡ್ಡ ಬಾವುಟ ಹಾರಿಸಲು ಅನುವಾಗಲು 150 ಅಡಿ ಎತ್ತರ ಇರುವ Flag Post ನಿರ್ಮಿಸಲು ಹಾಗೂ Flagಗೆ ಸಂಬಂಧಪಟ್ಟಂತೆ ಟೆಂಡರ್ ಕರೆದು ಅಂತಿಮಗೊಳಿಸಲು ಈಗಾಗಲೇ ತಾಂತ್ರಿಕ ಸಮಿತಿ ಸಭೆ ಹಾಗೂ ಕಾಮಗಾರಿ ಸಮಿತಿ ಸಭೆಯಲ್ಲಿ ಅನುಮೋದನೆಯಾಗಿದೆ. ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ ಈ ಕಾಮಗಾರಿಯನ್ನು ನಿರ್ವಹಿಸಲು ಹಾಗೂ ಆಗುವ ವೆಚ್ಚವನ್ನು ಭರಿಸಲು ಸಿಂಡಿಕೇಟ್ ಅನುಮೋದಿಸಬೇಕೆಂದು ಕೋರಿದರು.

2. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ ಸ್ವಾತಂತ್ರ್ಯೋತ್ಸವ ಆಚಾರಣೆಯನ್ನು ಮಾಡಲು ಒಂದು ಸಮಿತಿಯನ್ನು ರಚಿಸಬೇಕೆಂದು ಕೋರಿದರು.

   ಚರ್ಚೆಯ ನಂತರ, ಸ್ವಾತಂತ್ರ್ಯೋತ್ಸವ ಆಚಾರಣೆಯನ್ನು ನಿಮಿತ್ತ ಸಮಿತಿಯನ್ನು ರಚಿಸಲು ಸಿಂಡಿಕೇಟ್ ಕುಲಪತಿಗಳಿಗೆ ಅಧೀಕರಿಸಲು ಹಾಗೂ 150 ಅಡಿ ಎತ್ತರ ಇರುವ Flag Post ನಿರ್ಮಿಸಲು ಹಾಗೂ Flagಗೆ ಟೆಂಡರ್ ಕರೆದು ತುರ್ತಾಗಿ ಮುಂದಿನ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಅನುಮೋದಿಸಿ ವಿವರಗಳನ್ನು ನಂತರ ಸಿಂಡಿಕೇಟ್‌ಗೆ ಮಂಡಿಸಲು ಸೂಚಿಸಿತು.

ಕುಲಪತಿಗಳು ಮಾತನಾಡಿ, ಈ ಸಭೆಯಲ್ಲಿ ಮುಂದೂಡಲ್ಪಟ್ಟ ಕಾರ್ಯಸೂಚಿಗಳೊಂದಿಗೆ ಈಗಾಗಲೇ ಹೊಸದಾಗಿ ಬಂದಿರುವ ಕಾರ್ಯಸೂಚಿಗಳನ್ನು ಒಟ್ಟಾಗಿ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸುವುದಾಗಿ ತಿಳಿಸಿದರು.

ವಂದನಾರ್ಪಣೆಯೊಂದಿಗೆ ಸಿಂಡಿಕೇಟ್ ಸಭೆಯು ಮುಕ್ತಾಯವಾಯಿತು.

ಕುಲಪತಿಯವರು